# ಆ ದಿವ್ಯಶಕ್ತಿಗೆ ನಮಿಸುವೆ

2007ರ ಇಸವಿ. ಎಪ್ರೋ ತಿಂಗಳಿನಿಂದ ನನ್ನವರಿಗೆ ಸೊಂಟ ನೋವು ಕಾಡುತ್ತಿತ್ತು. 'ನಿಮಗೇನದು ಹೆಂಗಸರಂತೆ ಸೊಂಟ ನೋವು' ಎಂದು ನಾನು ಯಾವಾಗಲೂ ಹಾಸ್ಯ ಮಾಡುತ್ತಿದ್ದೆನಾದರೂ ನೋವು ಹೆಚ್ಚಾದಾಗ ಸಿಕ್ಕ ಸಿಕ್ಕ ವೈದ್ಯರಿಗೆಲ್ಲಾ ತೋರಿಸಿದೆವು. ಇಸಿಜಿ, ಎಕ್ಸ್‌ರೇ ಎಂದು ಹಲವಾರು ಪರೀಕ್ಷೆಗೊಳಗಾದರೂ ಪರಿಣಾಮ ಮಾತ್ರ ಶೂನ್ಯ. ಅದೃಷ್ಟವಶಾತ್ ನನ್ನ ತಂಗಿಯ ಗಂಡ ವೈದ್ಯರಾದ ಕಾರಣ ಆಕೆ ನನ್ನನ್ನು ಛತ್ತೀಸ್‌ಗಢದಿಂದ ಮಂಗಳೂರಿಗೆ ನನ್ನವರ ಚಿಕಿತ್ಸೆಗೆಂದೇ ಕರೆದಳು. ಎಂಆರ್ಐ ಮಾಡಿಸಲಾಯಿತು.

ಅದರಿಂದಲೇ ನನ್ನವರ ದೇಹದೊಳಗಿನ ರೋಗ ಹೊರಬಿತ್ತು. ನನ್ನ ಜಂಘಾಬಲವೇ ಉಡುಗಿಹೋಯಿತು. ಅವರ ಬೆನ್ನೆಲುಬು ಮತ್ತು ನರಗಳ ನಡುವೆ ಉದ್ದಕ್ಕೂ ಸಣ್ಣ ಸಣ್ಣ ಗಡ್ಡೆಗಳು ಬೆಳೆದಿದ್ದವು. ಕೂಡಲೇ ಶಸ್ತ್ರಚಿಕಿತ್ಸೆ, ರೇಡಿಯೇಷನ್, ಕಿಮೋಥೆರಪಿ ಸರಣಿ ಚಿಕಿತ್ಸೆಯಾಗಬೇಕೆಂದರು. ಮಂಗಳೂರು ಪರಿಚಿತ ಸ್ಥಳವಾದರೂ ಆಧಾರ ಸ್ತಂಭ ಬೇಕಲ್ಲವೇ! ಇಂತಹ ಸಂದಿಗ್ಧತೆಯನ್ನು ಕನಸಿನಲ್ಲೂ ಊಹಿಸದ ನಾನು ಬಿದ್ದ ಪೆಟ್ಟಿಗೆ ತತ್ತರಿಸುತ್ತ ದೇವರನ್ನು ಬೇಡುತ್ತಾ ಅಳತೊಡಗಿದೆ. ಅಣ್ಣ, ಅಪ್ಪ, ಅಮ್ಮ, ಅತ್ತಿಗೆಯರ ಆಶ್ರಯದಲ್ಲಿ, ತಂಗಿ ಬಾವಾಜಿಯವರ ಬೆಂಬಲದಿಂದ ಶಸ್ತ್ರಚಿಕಿತ್ಸೆ ರೇಡಿಯೇಷನ್ ಆಗಿ ಕಿಮೋಥೆರಪಿಗೆಂದು ಛತ್ತೀಸ್‌ಗಢಕ್ಕೆ ಹಿಂದಿರುಗಿದೆ.

ನನ್ನವರ ದೈಹಿಕ ಸ್ಥಿತಿ ಕಂಡು ನಾನು ಕುಗ್ಗಿಹೋಗಿದ್ದೆನಾದರೂ ನನ್ನ ಅತ್ತೆಯವರು ಸರಿಯಾದ ಸಮಯಕ್ಕೆ ಬಂದು ತಮ್ಮ ಮಗನನ್ನು ಆಶೀರ್ವದಿಸಿ ಕಣ್ಣುಂಬಿಕೊಂಡು ನನ್ನ ಕೈತುಂಬಾ ಹಸಿರು ಬಳೆಗಳನ್ನು ತೊಡಿಸಿ 'ನಿನ್ನ ಗಂಡನಿಗೇನು ಆಗುವುದಿಲ್ಲಮ್ಮಾ' ಎಂದು ನನ್ನನಪ್ಪಿಕೊಂಡರು. ದೇವರೇ ಅತ್ತೆಯ ಮೂಲಕ ನನ್ನಲ್ಲಿ ಧೈರ್ಯ ತುಂಬಲು ಬಂದರೇನೋ ಎಂಬಂತೆ ದಿವ್ಯಶಕ್ತಿಯೊಂದು ನನ್ನಲ್ಲಿ ಆತ್ಮಸ್ಥೈರ್ಯ ಹೆಚ್ಚಿಸಿತ್ತು. ಆ ದಿನಗಳಲ್ಲಿ ನನ್ನ ಮಟ್ಟಿಗೆ ಆ ವೈದ್ಯರು, ತಂಗಿಯ ಗಂಡ, ಅತ್ತೆಯವರು ಹಾಗೂ ನನ್ನನ್ನು ಬೆಂಬಲಿಸಿದ ನನ್ನ ತಂಗಿಯರು ಶಕ್ತಿದೇವತೆಯರಂತೆ ಕಂಡರು.

—ರಾಜಲಕ್ಷ್ಮಿ ವಿ. ಶೆಣೊಯ್, ಬೆಂಗಳೂರು



# ತಾಯಿಗಿಂತ ಬೇರೆ ಶಕ್ತಿ ಉಂಟೆ?

ಜನ್ಮ ಕೊಟ್ಟು ಗಟ್ಟಿ ನೆಲೆ ಕಂಡುಕೊಳ್ಳುವ ತನಕವೂ ಬೆನ್ನೆಲುಬಾಗಿ ನಿಂತ ಹೆತ್ತಮ್ಮನಲ್ಲದೇ ಇನ್ನು ಯಾರು ನನಗೆ ಶಕ್ತಿದೇವತೆಯಾಗಲು ಸಾಧ್ಯ?

ಸುಮಾರು 1967ನೇ ಇಸವಿ. ನಾವೆಲ್ಲರೂ ಮೈಸೂರಿನಲ್ಲಿ ವಿಹಾರಾರ್ಥ 3 ದಿನ ತಂಗಿದ್ದೆವು. ನಮ್ಮ ತಂದೆ ಜಮೀನಿನ ಕೆಲಸದ ಮೇಲೆ ತುರ್ತಾಗಿ ತುಮಕೂರಿಗೆ ಹೋಗಬೇಕಾಗಿ ಬಂದದ್ದರಿಂದ ಅವರು ನಮ್ಮನ್ನು ಕೆ.ಆರ್. ನಗರ ಪ್ರೈವೇಟ್ ಬಸ್‌ನಲ್ಲಿ ಹತ್ತಿಸಿ ತುಮಕೂರಿಗೆ ಬಸ್ಸಿನಲ್ಲಿ ಹೋದರು.

ಇತ್ತ ಅಮ್ಮ, ತಮ್ಮ ಹಾಗೂ ನನ್ನ ತಂಗಿ ಊರಿನತ್ತ ಹೋಗುತ್ತಿದ್ದೆವು. ನಮ್ಮ ಬಸ್ಸು ವಿಪರೀತ ವೇಗದಿಂದ ಹೋಗುತ್ತಿತ್ತು. ಸ್ಪೀಡ್ ನೋಡಿ ರೋಮಾಂಚನ ಮತ್ತು ಹೆದರಿಕೆಯೂ ಆಗುತ್ತಿತ್ತು. ಆಗ ಸರಿಸುಮಾರು ರಾತ್ರಿ 10 ಗಂಟೆ ಆಗಿರಬಹುದು. ನಮ್ಮ ಬಸ್ಸಿನಲ್ಲಿ ಕೇವಲ ಹತ್ತು ಹನ್ನೆರಡು ಪ್ರಯಾಣಿಕರಿದ್ದರು.

ನಾವು ಕುಳಿತ ಬಸ್ಸು ಇನ್ನೇನು 2 ಮೈಲಿ ಬರುವಷ್ಟರಲ್ಲಿ ಡ್ರೈವರ್ ನಿಯಂತ್ರಣ ತಪ್ಪಿ ರಸ್ತೆ ಬದಿಯಲ್ಲಿದ್ದ ಒಂದು ದೊಡ್ಡ ಮರಕ್ಕೆ ಡಿಕ್ಕಿ ಹೊಡೆದೇಬಿಟ್ಟಿತು. ಡ್ರೈವರ್ ಪಕ್ಕದ ಸೀಟಿನಲ್ಲೇ ಕುಳಿತು ಹರಟೆ ಹೊಡೆಯುತ್ತಿದ್ದ ಕಂಡಕ್ಟರ್ ಸೇರಿದಂತೆ ಮುಂದೆ ಕುಳಿತಿದ್ದವರಿಗೆ ಹೆಚ್ಚು ಏಟಾಗಿತ್ತು. ನಾವು ಅಮ್ಮನನ್ನು ತಬ್ಬಿಕೊಂಡು ಅಳುತ್ತಾ ಹೆದರಿಯೇಬಿಟ್ಟಿದ್ದೆವು.

ಆಗ ಅಮ್ಮ, 'ದೊಡ್ಡವನಾದ ನೀನೇ ಹೀಗೆ ಹೆದರಿದರೆ ಹೇಗೆ. ನಾನು ಇಲ್ಲಿಯೇ ಇದ್ದು ಯಾರಾದರೂ ದಾರಿಹೋಕರು ಸಿಕ್ಕರೆ ಏನಾದರೂ ವ್ಯವಸ್ಥೆ ಮಾಡುತ್ತೇನೆ. ನೀನು ಈಗಲೇ ಊರಿನ ಒಳಗೆ ಪೊಲೀಸ್ ಠಾಣೆಗೆ ಹೋಗಿ ಸುದ್ದಿ ಮುಟ್ಟಿಸಿ ಅವರನ್ನು ಇಲ್ಲಿಗೇ ಕರೆದುಕೊಂಡು ಬಾ' ಎಂದು ನನ್ನೊಬ್ಬನನ್ನೇ ಆ ರಾತ್ರಿಯಲ್ಲಿ ಕಳುಹಿಸಿದರು. ನಾನೋ ಪಕ್ಕಾ ಹೆದರುಪುಕ್ಕಲ ಸ್ವಭಾವದವ. ಅಮ್ಮನ ಮಾತನ್ನು ಮೀರಲು ಸಾಧ್ಯವಿಲ್ಲದೆ ಜೀವವನ್ನು ಕೈಯಲ್ಲಿ ಹಿಡಿದು ಓಡಿದೆ. ಅಂತೂ ಪೊಲೀಸ್ ಸ್ಟೇಷನ್‌ಗೆ ಹೋಗಿ ಸುದ್ದಿ ಮುಟ್ಟಿಸಿದೆ. ಕೂಡಲೇ ಕಾರ್ಯಪ್ರವೃತ್ತರಾದ ಅವರು ಆಸ್ಪತ್ರೆ ಸಿಬ್ಬಂದಿಯೊಡನೆ ನನ್ನನ್ನೂ ಕರೆದುಕೊಂಡು ಹೊರಟರು.

ಒಂದು ಫರ್ಲಾಂಗ್ ಕೂಡ ನಾವು ಹೋಗಿರಲಿಲ್ಲ, ನಮ್ಮ ಅಮ್ಮ ಹಾಗೂ ಕೆಲವು ಪ್ರಯಾಣಿಕರ ಜೊತೆ ಸೇರಿ ಬಸ್ಸಿನಲ್ಲಿದ್ದ ಎಲ್ಲರನ್ನೂ ಸುತ್ತಮುತ್ತಲಿನ ಗ್ರಾಮಸ್ಥರ ಸಹಾಯ ಪಡೆದು ಎರಡು ಮೂರು ಎತ್ತಿನ ಗಾಡಿಗಳಲ್ಲಿ ಆಸ್ಪತ್ರೆ ಕಡೆಗೆ ಕರೆದುಕೊಂಡು ಬರುತ್ತಿದ್ದರು. ಮುಂದಿನ ಕಾರ್ಯಗಳು ಸಾಂಗವಾಗಿ ನೆರವೇರಿದವು. ಪೊಲೀಸಿನವರು ಹಾಗೂ ಆಸ್ಪತ್ರೆಯ ಸಿಬ್ಬಂದಿ ವರ್ಗ, ಊರಿನ ಪ್ರಮುಖರು ನನ್ನ ತಾಯಿಯ ಧೈರ್ಯ ಹಾಗೂ ಸಹಾಯವನ್ನು ಮೆಚ್ಚಿದರು. ಆ ಕ್ಷಣ ನನಗೆ ನನ್ನ ಅಮ್ಮ ಸಾಕ್ಷಾತ್ ಶಕ್ತಿ ಸ್ವರೂಪಿಣಿಯ ಹಾಗೇ ನನಗೆ ಅನಿಸಿದ್ದು ಅತಿಶಯೋಕ್ತಿಯಲ್ಲ.

—ಆರ್. ವೀರೇಶ್ ಕುಮಾರ್

## ಕನ್ನಡದ ಕವಿತೆಯ ಸಾಲು...

ಮಾತು ಮಾತಿಗೆ, ಕಡು ಕಷ್ಟದ ಸಮಯದಲ್ಲಿ ಮನೋಸ್ಥೈರ್ಯ ತುಂಬಲು ಅಥವಾ ಇನ್ನೊಬ್ಬರಿಗೆ ಸಾಂತ್ವನ ಹೇಳುವಾಗ, ಖುಷಿಯಾದಾಗ, ಆತಂಕ, ಒತ್ತಡದಲ್ಲಿದ್ದಾಗ ಸಂತೈಸಬಹುದಾದ ಕನ್ನಡದ ಕವಿತೆಯ ಸಾಲು ಯಾವುದು? ಯಾವ ಸಂದರ್ಭದಲ್ಲೆಲ್ಲ ಆ ಸಾಲು ನಿಮ್ಮನ್ನು ಸಮಾಧಾನದ ಕಡೆಗೆ ಕೈ ಹಿಡಿದು ಕರೆದೊಯ್ದಿದೆ? ನಮ್ಮೊಂದಿಗೆ ಹಂಚಿಕೊಳ್ಳಿ. ನಿಮ್ಮ ನೆಚ್ಚಿನ ಸಾಲು, ಉಳಿದವರ ಮನದೊಳಗೂ ಸಮಾಧಾನದ ಕುಡಿ ಹೊತ್ತಿಸಬಹುದು. ಬರಹ 150ರ ಪದಮಿತಿಯಲ್ಲಿರಲಿ. ಕೊನೆಯ ದಿನ ನವೆಂಬರ್ 30. ಲೇಖನವನ್ನು ನುಡಿ ಅಥವಾ ಯುನಿಕೋಡ್‌ನಲ್ಲಿ editorsu@sudha.co.inಗೆ ಮೇಲ್ ಮಾಡಿ.